ಶ್ರೀ ಎಸ್.ಆರ್. ಮಹೇಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಏನೊಂದು ಉತ್ತರವನ್ನು ಒದಗಿಸಿದ್ದಾರೆ. ಅದು ಸರಿ ಇದೆ.

ಅಧ್ಯಕ್ಷರು: O.k., Thank you.

ಡಾ॥ ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, ನನ್ನ ಎರಡು *pending questions* ಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ತಾವು ಆಮೇಲೆ ಕೇಳಿ. ಮಾನ್ಯ ಆರ್.ಅಶೋಕ್‌ರವರ ಪರವಾಗಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ತಾವು ಕೇಳಿ.

ಸಾಮಾಜಿಕ ಮತ್ತು ಶೈಕ್ಷಣಿಕ ಜನಜಾಗೃತಿ ಕಾರ್ಯಕ್ರಮ

285 (1840); ಶ್ರೀ ಅಶೋಕ್ ಆರ್. (ಪದ್ಮನಾಭನಗರ)

ಅ) ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಜನಗಣತಿ ಕಾರ್ಯವು ಪೂರ್ಣ ಪ್ರಮಾಣದಲ್ಲಿ ಮುಗಿದಿರುತ್ತದೆಯೇ; ಜಾತಿ ಗಣತಿ ನಡೆಸಲು ಕಾರಣಗಳೇನು;

ಆ) ಸಾಮಾಜಿಕ ಮತ್ತು ಶೈಕ್ಷಣಿಕ ಜನಗಣತಿ ಕಾರ್ಯಕ್ರಮವು ಪೂರ್ಣ ಪ್ರಮಾಣದಲ್ಲಿ ಮುಗಿಯದಿರಲು ಕಾರಣವೇನು;

ಇ) ರಾಜ್ಯದಲ್ಲಿ ಜನಗಣತಿ ಸಮೀಕ್ಷೆ ಕಾರ್ಯವು ಯಾವ ಯಾವ ಜಿಲ್ಲೆಯಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ (ಮಾಹಿತಿ ನೀಡುವುದು); ಬೆಂಗಳೂರು ನಗರದಲ್ಲಿ ಪೂರ್ಣ ಪ್ರಮಾಣದಲ್ಲಿ ಜನಗಣತಿ ಕಾರ್ಯ ನಡೆಯದೇ ಇರುವುದು ನಿಜವಲ್ಲವೆ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು;

ಈ) ಜನಗಣತಿ ಕಾರ್ಯಕ್ರಮದಲ್ಲಿ ಯಾವ ಯಾವ ಕ್ಷೇತ್ರದಿಂದ ಕಾರ್ಯಕರ್ತರನ್ನು ನೇಮಿಸಲಾಗಿತ್ತು. ಈ ಜನಗಣತಿ ಕಾರ್ಯಕ್ಕೆ ಸರ್ಕಾರದಿಂದ ಖರ್ಚಾಗಿರುವ ವೆಚ್ಚವೆಷ್ಟು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯನ್ನು ಹೊರತುಪಡಿಸಿ, ಎಲ್ಲಾ ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಂಡಿರುತ್ತದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ 1995ರ ಸೆಕ್ಷನ್ 9(i) (ii) ರನ್ವಯ ರಾಜ್ಯದ ಎಲ್ಲಾ ವರ್ಗಗಳ / ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಕುರಿತು ನಡೆಸಲಾದ ಸಮೀಕ್ಷೆಯ ಸಮಗ್ರ ಅಂಕಿ-ಅಂಶಗಳನ್ನಾಧರಿಸಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಪೂರಕವಾಗುವ ಕಾರ್ಯಕ್ರಮಗಳನ್ನು ರೂಪಿಸುವ ಉದ್ದೇಶದಿಂದ ಕೈಗೊಳ್ಳಲಾಗಿದೆ.

ಆ) ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಜಿಲ್ಲೆಗಳಲ್ಲಿ ಪೂರ್ಣಗೊಂಡಿರುತ್ತದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 21,16,949 ಕುಟುಂಬಗಳನ್ನು ಸಮೀಕ್ಷೆಗಾಗಿ ಗುರುತಿಸಲ್ಪಟ್ಟು, ಈ ಪೈಕಿ 18.80 ಲಕ್ಷ (ಶೇಕಡ 88.82 ರಷ್ಟು) ಕುಟುಂಬಗಳ ಮಾಹಿತಿಯನ್ನು ಸಮೀಕ್ಷೆಯಡಿ ಸಂಗ್ರಹಿಸಲಾಗಿದೆ. ಉಳಿದ 2.37 ಲಕ್ಷ ಕುಟುಂಬಗಳಲ್ಲಿ, ಬೀಗ ಹಾಕಿದ ಕುಟುಂಬಗಳು 101846, ಮಾಹಿತಿ ನೀಡಲು ನಿರಾಕರಿಸಿದ ಕುಟುಂಬಗಳು 21645, ವ್ಯಕ್ತಿಗಳು ತಾತ್ಕಾಲಿಕವಾಗಿ ವಾಸವಾಗಿರುವ ಸಾಂಸ್ಥಿಕ ಕುಟುಂಬಗಳಾದ (Institutional households) ವಸತಿ ನಿಲಯಗಳು, ಪಿ.ಜಿ. ಗೃಹಗಳು, ಹೋಟೆಲ್ ಮತ್ತು ಲಾಡ್ಜ್‌ಗಳು 113251 ಸೇರಿರುತ್ತವೆ.

ಇ) ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಜಿಲ್ಲಾವಾರು ಪ್ರಗತಿ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆಯು ಪೂರ್ಣಗೊಂಡಿರುತ್ತದೆ. ನಗರ ಪ್ರದೇಶವಾದ ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶೇಕಡ 88.82 ರಷ್ಟು ಕುಟುಂಬಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮೀಕ್ಷೆಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ಈ ಕೆಳಕಂಡ ಕ್ರಮಗಳನ್ನು ಜರುಗಿಸಲಾಗಿದೆ.

- ಸಮೀಕ್ಷಾವಧಿಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದಿ:11.04.2015 ರಿಂದ ಪ್ರಾರಂಭವಾಗಿ ದಿ:30.04.2015 ರಂದು ಮುಕ್ತಾಯಗೊಳ್ಳಬೇಕಾಗಿತ್ತು. ಆದರೆ, ಸಮೀಕ್ಷೆಯಡಿ ಪೂರ್ಣ ಪ್ರಮಾಣದಲ್ಲಿ ಎಲ್ಲಾ ಕುಟುಂಬಗಳನ್ನು ಒಳಪಡಿಸಲು ರಾಜ್ಯಾದ್ಯಂತ ಸಮೀಕ್ಷಾ ಕಾಲಾವಧಿಯನ್ನು ದಿ:05.05.2015 ರವರೆಗೆ ವಿಸ್ತರಣೆ ಮಾಡಲಾಗಿತ್ತು.
- ರಾಜ್ಯಾದ್ಯಂತ ವಿಸ್ತರಣೆ ಮಾಡಲಾದ ದಿ:05.05.2015ರ ಅವಧಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮೀಕ್ಷೆಯು ಪೂರ್ಣಗೊಳ್ಳದ ಕಾರಣ, ಬಿಬಿಎಂಪಿ ವ್ಯಾಪ್ತಿಗೆ ಕಾಲಾವಧಿಯನ್ನು ದಿ:10.05.2015 ರವರೆಗೆ ಹಾಗೂ ಅಂತಿಮವಾಗಿ ದಿ:15.05.2015 ರವರೆಗೆ ವಿಸ್ತರಿಸಲಾಯಿತು.
- ಮೇಲೆ ತಿಳಿಸಿದ ದಿನಾಂಕಗಳವರೆಗೂ ಸಹ ಸಮೀಕ್ಷೆಗೆ ಒಳಪಡದ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲು ದಿ:17.05.2015 ರಂದು ಆಯೋಗವು ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿ, ಇದರಲ್ಲಿ ಬಿಬಿಎಂಪಿ ವ್ಯಾಪ್ತಿಯ 8 ವಲಯಗಳ ಜಂಟಿ ಆಯುಕ್ತರುಗಳನ್ನು ಸಂಪರ್ಕಿಸಲು ಅವರುಗಳ ಹೆಸರು, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ–ಮೇಲ್ ವಿಳಾಸವನ್ನು ನಮೂದಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿತ್ತು.
- ಜೊತೆಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದಲೂ ಸಹ ಸಮೀಕ್ಷೆಗೆ ಒಳಪಡದ ಕುಟುಂಬಗಳು ಸಮೀಕ್ಷೆಗೆ ಒಳಪಡಲು ವಲಯವಾರು ಜಂಟಿ ಆಯುಕ್ತರು ಹಾಗೂ 198 ವಾರ್ಡ್‌ಗಳ ಚಾರ್ಜ್ ಅಧಿಕಾರಿಗಳ ದೂರವಾಣಿ ಸಂಖ್ಯೆಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು.

- ಆಯೋಗದ ವತಿಯಿಂದಲೂ ಸಮೀಕ್ಷೆಯ ಕುರಿತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸಹಾಯವಾಣಿಯನ್ನು (44554444) ಸ್ಥಾಪಿಸಲಾಗಿತ್ತು.
- ಆದಾಗ್ಯೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಮೇಲಿನ ವಿಸ್ತರಣಾವಧಿಯಲ್ಲಿಯೂ ಸಹ ಸಮೀಕ್ಷೆಗೆ ಒಳಪಡದ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲು ಮತ್ತು ಸಮೀಕ್ಷೆಯಲ್ಲಿ ಸಂಗ್ರಹಿಸಲಾದ ಮಾಹಿತಿಯಲ್ಲಿ, ಮಾಹಿತಿದಾರರ ಪ್ರಕಾರ ನ್ಯೂನತೆಗಳಿದ್ದಲ್ಲಿ ಲಿಖಿತ ಮನವಿಗಳ ಮೂಲಕ ಸರಿಪಡಿಸಿಕೊಳ್ಳಲು ಸಾರ್ವಜನಿಕರಿಗೆ ದಿ:30.05.2015 ರವರೆಗೆ ಕಾಲಾವಕಾಶವನ್ನು ನೀಡಲಾಗಿತ್ತು.

  ಮೇಲೆ ತಿಳಿಸಿದ ಕ್ರಮಗಳನ್ನು ಜರುಗಿಸಿ ಬೆಂಗಳೂರು ನಗರದಲ್ಲಿ ಸಮೀಕ್ಷೆಯನ್ನು ನಡೆಸಲಾಗಿದೆ.

ಈ) ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯದಲ್ಲಿ ವಿವಿಧ ಇಲಾಖೆಗಳಿಂದ 1.60 ಲಕ್ಷ ಸರ್ಕಾರಿ ಸಿಬ್ಬಂದಿ / ಅಧಿಕಾರಿಗಳು ಕಾರ್ಯನಿರ್ವಹಿಸಿರುತ್ತಾರೆ. ಸಮೀಕ್ಷೆಯ ಗಣತಿದಾರರನ್ನಾಗಿ 2015ರ ಬೇಸಿಗೆ ರಜಾವಧಿಯಲ್ಲಿ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಇದಲ್ಲದೆ, ಕಂದಾಯ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕೈಗಾರಿಕೆ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೃಷಿ, ತೋಟಗಾರಿಕೆ, ಪಶುಪಾಲನಾ ಮುಂತಾದ ಇಲಾಖಾ ಸಿಬ್ಬಂದಿ/ಅಧಿಕಾರಿಗಳನ್ನು ಸಮೀಕ್ಷಾ ಕಾರ್ಯಕ್ಕೆ ನೇಮಿಸಿಕೊಳ್ಳಲಾಗಿತ್ತು. ಸಮೀಕ್ಷೆಯ ಅಂದಾಜು ವೆಚ್ಚವು ₹. 189.00 ಕೋಟಿಗಳಾಗಿದ್ದು, ಈ ಪೈಕಿ ಸರ್ಕಾರದಿಂದ ₹. 134.96 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆ ಮಾಡಲಾದ ಅನುದಾನದಿಂದ ₹. 117.45 ಕೋಟಿಗಳನ್ನು ಸಮೀಕ್ಷಾ ಕಾರ್ಯಕ್ಕಾಗಿ ಜಿಲ್ಲೆಗಳಿಗೆ / ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದ್ದು, ₹. 36.00 ಕೋಟಿಗಳನ್ನು ಇಲ್ಲಿಯವರೆಗೆ ಖರ್ಚು ಮಾಡಲಾಗಿದೆ.

ಅನುಬಂಧ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1840

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಡಿ ಸಮೀಕ್ಷೆಗೆ ಒಳಪಟ್ಟ ಜಿಲ್ಲಾವಾರು ಕುಟುಂಬಗಳ ವಿವರಗಳು

ಕ್ರ ಸಂ	ಜಿಲ್ಲೆಯ ಹೆಸರು	2011ರ ಜನಗಣತಿ ಪ್ರಕಾರ ಒಟ್ಟು ಕುಟುಂಬಗಳು	ಸಮೀಕ್ಷೆ-2015ಕ್ಕೆ ಗುರುತಿಸಲಾದ ಬ್ಲಾಕುಗಳಲ್ಲಿರುವ ಕುಟುಂಬಗಳ ಸಂಖ್ಯೆ	2011ರ ಕುಟುಂಬಗಳಿಗೆ ಹೋಲಿಸಿದರೆ ವ್ಯತ್ಯಾಸ	ಸಮೀಕ್ಷೆಗೆ ಒಳಪಟ್ಟ ಕುಟುಂಬಗಳ ಸಂಖ್ಯೆ	ಸಮೀಕ್ಷೆಗೆ ಒಳಪಡಿಸಿದ % ಕುಟುಂಬಗಳು
1	2	3	4	5	6	7
1	ಬೆಳಗಾವಿ	983854	1043630	59776	1043630	100
2	ಬಾಗಲಕೋಟೆ	361149	385641	24492	385641	100
3	ವಿಜಯಪುರ	408806	437736	28930	437736	100
4	ಬೀದರ	319937	330567	10630	330567	100
5	ರಾಯಚೂರು	363853	386143	22290	386143	100
6	ಕೊಪ್ಪಳ	264595	279956	15361	279956	100
7	ಗದಗ	219096	237041	17945	237041	100
8	ಧಾರವಾಡ	382700	405684	22984	405684	100
9	ಉತ್ತರಕನ್ನಡ	324530	342600	18070	342600	100
10	ಹಾವೇರಿ	330414	364257	33843	364257	100
11	ಬಳ್ಳಾರಿ	489118	491435	2317	491435	100
12	ಚಿತ್ರದುರ್ಗ	357003	376665	19662	376665	100
13	ದಾವಣಗೆರೆ	410176	435276	25100	435276	100
14	ಶಿವಮೊಗ್ಗ	406816	424760	17944	424760	100
15	ಉಡುಪಿ	253078	262241	9163	262241	100
16	ಚಿಕ್ಕಮಗಳೂರು	276085	280311	4226	280311	100
17	ತುಮಕೂರು	640081	674067	33986	674067	100
18	ದಕ್ಷಿಣ ಕನ್ನಡ	292014	335170	43156	335170	100
19	ಮಂಡ್ಯ	428625	444964	16339	444964	100
20	ಹಾಸನ	433453	452064	18611	452064	100
21	ದಕ್ಷಿಣ ಕನ್ನಡ	439733	454780	15047	454780	100
22	ಕೊಡಗು	142716	139082	-3634	139082	100
23	ಮೈಸೂರು	700968	705030	4062	705030	100
24	ಚಾಮರಾಜನಗರ	244874	256265	11391	256265	100
25	ಕಲಬುರಗಿ	471601	496157	24556	496157	100
26	ಯಾದಗಿರಿ	202063	210044	7981	210044	100
27	ಕೋಲಾರ	333348	349428	16080	349428	100
28	ಚಿಕ್ಕಬಳ್ಳಾಪುರ	284698	306418	21720	306418	100
29	ರಾಮನಗರ	229279	241925	12646	241925	100
30	ಬೆಂಗಳೂರು(ಗ್ರಾ)	260533	268351	7818	268351	100
ಅ) ಜಿಲ್ಲಾ ಮಟ್ಟ		11255196	11817688	562492	11817688	100
ಆ) ಪಟ್ಟಣಂಪ		2101831	2116949	15118	1880207	88.82
ಅ+ಆ)ರಾಜ್ಯದ ಮಟ್ಟ		13357027	13934637	577610	13697895	98.30

ಟಿಪ್ಪಣಿ: 2011ರ ಜನಗಣತಿಯಲ್ಲಿ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ, ಕಾಫಿ ಪ್ಲಾಂಟೇಷನ್ ವ್ಯಾಪ್ತಿಯಲ್ಲಿದ್ದ ಕಾರ್ಮಿಕರ ಲೈನ್ ಮನೆಗಳು ಸಮೀಕ್ಷೆ ಸಮಯದಲ್ಲಿ ಬಹುತೇಕ ಖಾಲಿ ಇದ್ದುದರಿಂದ, ಸಮೀಕ್ಷೆಗೆ ಒಳಪಟ್ಟ ಕುಟುಂಬಗಳ ಸಂಖ್ಯೆಯು 2011ರ ಜನಗಣತಿಗಿಂತ ಕಡಿಮೆ ಇರುತ್ತದೆ.

Annexure

STARRED QUESTION NO.: 1840

Social and Educational Survey - District wise Household covered

Sl No.	Districts name	Households as per 2011 census	Households in the enumeration block as per form-2	Difference of households with 2011 census	No.of households covered in the survey	% of households covered in the survey
1	2	3	4	5	6	7
1	Belgavi	983854	1043630	59776	1043630	100
2	Bagalokote	361149	385641	24492	385641	100
3	Vijayapura	408806	437736	28930	437736	100
4	Bidar	319937	330567	10630	330567	100
5	Raichur	363853	386143	22290	386143	100
6	Koppala	264595	279956	15361	279956	100
7	Gadag	219096	237041	17945	237041	100
8	Dharwad	382700	405684	22984	405684	100
9	Uttarakannada	324530	342600	18070	342600	100
10	Haveri	330414	364257	33843	364257	100
11	Bellary	489118	491435	2317	491435	100
12	Chitradurga	357003	376665	19662	376665	100
13	Davangere	410176	435276	25100	435276	100
14	Shivamoga	406816	424760	17944	424760	100
15	Udupi	253078	262241	9163	262241	100
16	Chikkamagaluru	276085	280311	4226	280311	100
17	Tumkur	640081	674067	33986	674067	100
18	Bengaluru (U)	292014	335170	43156	335170	100
19	Mandya	428625	444964	16339	444964	100
20	Hassan	433453	452064	18611	452064	100
21	Dakshinakannada	439733	454780	15047	454780	100
22	Kodagu	142716	139082	-3634	139082	100
23	Mysore	700968	705030	4062	705030	100
24	Chamarajanagar	244874	256265	11391	256265	100
25	Kalburgi	471601	496157	24556	496157	100
26	Yadgiri	202063	210044	7981	210044	100
27	Kolar	333348	349428	16080	349428	100
28	Chikkaballapur	284698	306418	21720	306418	100
29	Bengaluru (R)	229279	241925	12646	241925	100
30	Ramanagar	260533	268351	7818	268351	100
	a) Districts total	11255196	11817688	562492	11817688	100
	b) BBMP	2101831	2116949	15118	1880207	88.82
	a+b) State total	13357027	13934637	577610	13697895	98.30

Note:

Due to the vacant houses in the coffee plantations during the survey work, the no.of households is less than the households covered in 2011 census.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಆರ್. ಅಶೋಕ್‌ರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ದಿನಾಂಕ 11.4.2015ರಿಂದ ಪ್ರಾರಂಭವಾಗಿ ದಿನಾಂಕ 30.04.2015ಕ್ಕೆ ಎಂದು ಇತ್ತು. ಅದನ್ನು ಮೇ ತಿಂಗಳಿನ ತನಕ extend ಮಾಡಿ ಸಮೀಕ್ಷೆಯನ್ನು ಮುಗಿಸಿದರು. ಬೆಂಗಳೂರಿನಲ್ಲಿ ಮತ್ತೆ ನಾಲ್ಕು ಸಲ extend ಮಾಡಿದರೂ ಕೂಡ 88.82% ಮಾತ್ರ ಸಮೀಕ್ಷೆ ಆಗಿದೆ. ಇನ್ನೂ ಸುಮಾರು 22% ನಷ್ಟು ಬೆಂಗಳೂರಿನ ಸಮೀಕ್ಷೆ ಆಗಿರುವುದಿಲ್ಲ. ಇದಕ್ಕೆ ಮಾನ್ಯ ಸಚಿವರು ಕಾರಣ ಹೇಳಿದ್ದಾರೆ, ನೋಡಿ. ಇದು ಹೇಗಿದೆ ಎಂದರೆ, ಸಮೀಕ್ಷೆ ಮಾಡಿದವರೋ, ಸಮೀಕ್ಷೆಯನ್ನು ಮಾಡಿಸಿದವರೋ, ಬೆಂಗಳೂರಿನ ಪರಿಸ್ಥಿತಿ ಏನಾಗಿದೆ ಎಂದರೆ ಬೀಗ ಹಾಕಿದಂತಹ ಕುಟುಂಬಗಳು 1,01,846 ಎಂದು ಇದೆ. ಬೀಗ ಹಾಕಿಕೊಂಡಿರುವವರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆಂಬ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ಇಲ್ಲಿ ತಾತ್ಕಾಲಿಕವಾಗಿ ವಾಸ ಮಾಡಿಕೊಂಡಿರುವವರು ಮಾಹಿತಿ ನೀಡುವುದಕ್ಕೆ ನಿರಾಕರಿಸಿದವರು ಎಂದು ಎಲ್ಲಾ ವಿವರಗಳನ್ನು ಕೊಟ್ಟಿದ್ದಾರೆ. ಬೆಂಗಳೂರಿನ ಬಿಬಿಎಂಪಿಯ ವ್ಯಾಪ್ತಿಯಲ್ಲಿರುವುದನ್ನು ಯಾವ ಕಾಲದಲ್ಲಿ ಪೂರ್ಣಗೊಳಿಸುತ್ತೀರಿ? ಈಗಾಗಲೇ ದಿನಾಂಕ 30.05.2015ಕ್ಕೆ ಅವಧಿಯು ಮುಗಿದುಹೋಗಿದೆ. ಇನ್ನೂ 22% ಇದೆ. ಇದರ ಅವಧಿಯನ್ನು extend ಮಾಡಿ ಯಾವ ಅವಧಿಯೊಳಗೆ ಪೂರ್ಣಗೊಳಿಸುತ್ತೀರೆಂದು ಹೇಳಬೇಕು.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಇಲ್ಲಿ ಎಲ್ಲರ ಮಾಹಿತಿಯನ್ನು ಸಂಗ್ರಹಿಸಬೇಕೆಂದು ನಮ್ಮ ಉದ್ದೇಶ ಇದೆ. ಬೆಂಗಳೂರಿನಲ್ಲಿ ಮಾಹಿತಿಯನ್ನು ಸಂಗ್ರಹಿಸುವ ಬಗ್ಗೆ ನ್ಯೂನತೆಯು ಆಯಿತು ನಿಜ. ಇದಕ್ಕೆ ಕಾರಣವೇನೆಂದರೆ ಎಲ್ಲಾ ಕಡೆಯಲ್ಲಿಯೂ ಸರ್ಕಾರಿ ನೌಕರರುಗಳು ಮತ್ತು ಸರ್ಕಾರಿ ಶಿಕ್ಷಕರುಗಳು ಇದ್ದಾರೆ. ಹೊರಜಿಲ್ಲೆಗಳಲ್ಲಿ ಈ ಬಗ್ಗೆ ಚೆನ್ನಾಗಿ ಸಮೀಕ್ಷೆಗಳು ಆಗಿದೆ. ಬೆಂಗಳೂರಿನಲ್ಲಿ ಸಮೀಕ್ಷೆ ಮಾಡುವುದರಲ್ಲಿ ನಮಗೆ ತೊಂದರೆ ಏನಾಗಿದೆ ಎಂದರೆ ಇಲ್ಲಿ ಸರ್ಕಾರಿ ಶಾಲೆಗಳು ಬಹಳ ಕಡಿಮೆ ಇದೆ. ಖಾಸಗಿ ಶಾಲೆಗಳು ಜಾಸ್ತಿ ಇದೆ. ಅವರಿಗೆ ಇಂಗ್ಲೀಷ್ ಬರುತ್ತದೆ, ಅಲ್ಲಿ ವಾಸ

ಮಾಡುತ್ತಿರುವಂತಹ ಪ್ರದೇಶದವರಿಗೆ ಕನ್ನಡ ಬರುವುದಿಲ್ಲ. ಇಲ್ಲಿ ಬರೆದುಕೊಳ್ಳುವವರಿಗೂ ಸಹ ಕನ್ನಡ ಬರುವುದಿಲ್ಲ. ಹೀಗಾಗಿ ಸ್ವಲ್ಪ ದಿನಗಳ ಕಾಲ ಅದು ಬಹಳ ಸಮಯವನ್ನು ಸಹ ತೆಗೆದುಕೊಳ್ಳುತ್ತದೆ. ಹೆಸರುಗಳು ಬಿಟ್ಟು ಹೋಗಿರುವಂತಹವರ ಬಗ್ಗೆ ಎಷ್ಟು ಕುಟುಂಬಗಳು ಈ ಮಾಹಿತಿಯಿಂದ ಹೊರಗೆ ಇದೆ, ಆ ಬಗ್ಗೆ ನಾವು ಗಂಭೀರವಾದಂತಹ ಚಿಂತನೆಯನ್ನು ಮಾಡುತ್ತಿದ್ದೇವೆ. ನಾನು ಈ ಸಂಬಂಧ ಆಯೋಗದವರ ಜೊತೆಯಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಎಲ್ಲಿ ಬಿಟ್ಟುಹೋಗಿದೆ, ಆ ಬಗ್ಗೆ ಮತ್ತೊಂದು ಸಾರಿ ಅಂತಹವರ ಮನೆಗಳ ಬಗ್ಗೆ ಮರುಗಣಕೀಕರಣ ಮಾಡುವ ಕ್ರಮವನ್ನು ಏಕೆ ಕೈಗೊಳ್ಳಬಾರದು? ಎಂಬ ಬಗ್ಗೆ ಅವರೊಡನೆ ಚರ್ಚೆ ಮಾಡಿ ನಂತರ ನನ್ನ ನಿರ್ಧಾರವನ್ನು ತಿಳಿಸುತ್ತೇನೆ.

ಅಧ್ಯಕ್ಷರು: O.K.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ಬಗ್ಗೆ ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೀರಿ. ಮುಂದೆ 22% ಅನ್ನು ಹೇಗೆ cover ಮಾಡಬೇಕೆಂಬುವುದರ ಬಗ್ಗೆ ಗಂಭೀರವಾಗಿ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ. ರಾಜ್ಯದಲ್ಲಿ 1,60,000 ಸಿಬ್ಬಂದಿಗಳು ಈ ವ್ಯವಸ್ಥೆಯಲ್ಲಿ ತೊಡಗಿಕೊಂಡಿದ್ದಾರೆ. ಅವರಿಗಾಗಿ ಸುಮಾರು 189 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಇದುವರೆಗೂ 134.96 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಆದರೆ ತಾವು 117.45 ಕೋಟಿಗಳನ್ನು ಮಾತ್ರ ಜಿಲ್ಲೆಗಳಿಗೆ ಹಂಚಿದ್ದೀರಿ. ಆದರೆ actually 36.00 ಕೋಟಿ ರೂಪಾಯಿಗಳು ಮಾತ್ರ ಅವರಿಗೆ ತಲುಪಿದೆ. ಅಂದರೆ ಅವರ ಹತ್ತಿರ ಕೆಲಸವನ್ನು ಮಾಡಿಸಿಕೊಂಡು ಉಳಿದ ಹಣವು ಜಿಲ್ಲೆಗಳಿಗೆ ಹೋಗಿದೆ. ಆದರೆ ಜಿಲ್ಲಾಧಿಕಾರಿಗಳು ಅದನ್ನು ಬಿಡುಗಡೆ ಮಾಡದೆ ಅವರ ಹತ್ತಿರ ಏತಕ್ಕಾಗಿ ಹಣವನ್ನಿಟ್ಟುಕೊಂಡಿದ್ದಾರೆ? ಅದರ interest ಏನಾದರೂ ತಾವು calculate ಮಾಡುತ್ತಿದ್ದೀರಾ? ಎಂದು ತಾವು ಹೇಳಬೇಕು. ಅವರುಗಳಿಗೆ ತಾವು ಯಾವಾಗ ಹಣವನ್ನು ಕೊಡುತ್ತೀರಿ? ತಾವು ಈ ಹಣವನ್ನು ಯಾವ ಕಾಲಮಿತಿಯೊಳಗೆ ಕೊಡುತ್ತೀರೆಂದು ಹೇಳಬೇಕು.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಇಲ್ಲಿ ಸಮೀಕ್ಷಾ ಕಾರ್ಯವು ಇನ್ನೂ ಪೂರ್ಣಗೊಂಡಿರುವುದಿಲ್ಲ. ಈಗಾಗಲೇ ಗಣತಿದಾರರಿಗೆ 50% ಹಣವನ್ನು online ಮೂಲಕವಾಗಿ ಜಮಾ ಮಾಡಲಾಗಿದೆ. ಇನ್ನು ಉಳಿಕೆಯ ಬಾಕಿ ಹಣವನ್ನು ಈಗ ಅಲ್ಲಿ Date Entry ಎಲ್ಲವೂ ನಡೆಯುತ್ತಿದ್ದು, ಅವೆಲ್ಲವೂ correct ಆಗಿದೆ ಎಂದು certify ಮಾಡಿದ ನಂತರ ಅವರಿಗೆ ಪೂರ್ಣ ಹಣವನ್ನು ತುಂಬುತ್ತೇವೆ. ಹಣ ಕೊಡುವುದರಲ್ಲಿ ಯಾವುದೇ ರೀತಿಯಾಗಿ ವಿಳಂಬ ಮಾಡುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಜಿಲ್ಲಾಧಿಕಾರಿಗಳಿಗೆ ಈಗಾಗಲೇ 36.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಉಳಿದ ಹಣವನ್ನು ನೀವು ಕೊಟ್ಟಿರುವುದಿಲ್ಲ.

ಶ್ರೀ ಸಿ.ಟಿ. ರವಿ: ಇಲ್ಲಿ ಬಿಬಿಎಂಪಿ ಯನ್ನು ಹೊರತು ಪಡಿಸಿ 100% ಸಮೀಕ್ಷೆಯಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಇಲ್ಲಿ ನೋಡಿದರೆ ಸಮೀಕ್ಷೆ ಕಾರ್ಯ ಪೂರ್ಣಗೊಂಡಿಲ್ಲವೆಂದು ಹೇಳುತ್ತಿದ್ದೀರಿ.

ಶ್ರೀ ಹೆಚ್. ಆಂಜನೇಯ: ಇಲ್ಲಿ ಸಮೀಕ್ಷೆಯಾಗಿದೆ, ಆದರೆ ಗಣಕೀಕರಣವಾಗಿರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನೀವು ಹಣವನ್ನು ಅವರಿಗೆ ಕೊಡಬೇಕಲ್ಲವೇ?

ಶ್ರೀ ಹೆಚ್. ಆಂಜನೇಯ: ತಾವು ಒಂದು ನಿಮಿಷ ಕೇಳಿ. ಹಣವನ್ನು ಕೊಡುವುದರಲ್ಲಿ ಯಾವುದೇ ವಿಳಂಬ ಇಲ್ಲ. ಈಗಾಗಲೇ ನಾವು ಜಿಲ್ಲಾಧಿಕಾರಿಗಳಿಗೆ ಹಣವನ್ನು ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳು ಅವರ ಕೆಲಸ ಕಾರ್ಯಗಳು ತೃಪ್ತಿಯಾಗಿದೆ ಎಂದು ದೃಢೀಕರಿಸಿಕೊಂಡು ಅವರಿಗೆ ಯಾವಾಗ ಬೇಕಾದರೂ ಹಣವನ್ನು ಬಿಡುಗಡೆ ಮಾಡಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಜಿಲ್ಲಾಧಿಕಾರಿ ಧೃಢೀಕರಣವನ್ನು ಹೇಗೆ ಮಾಡುತ್ತಾರೆಂದು ತಾವೇ ಹೇಳಿ. ಅವರು ಕೆಲಸ ಮಾಡಿ ಮುಗಿಸಿ ಒಂದು

ವರದಿಯನ್ನು ಕೊಟ್ಟಿದ್ದಾರೆ. ಮುಂದಿನದು compile ಮಾಡುವುದು ಅವರ ಕೆಲಸವಲ್ಲ, ಇದು ಬೇರೆಯವರ ಕೆಲಸವಾಗಿದೆ. ನೀವು ಶಿಕ್ಷಕರು ಮತ್ತು ಬೇರೆ ಸಿಬ್ಬಂದಿಗಳಿಗೆ ಹಣವನ್ನು ಕೊಡಬೇಕಲ್ಲವೇ?

ಅಧ್ಯಕ್ಷರು: ನಿಮ್ಮ ಭಾಷಣವನ್ನು ನೀವು ಮಾಡಿ ಅವರ ಭಾಷಣವನ್ನು ಅವರು ಮಾಡಲಿ. ಅವರುಗಳು ಕೆಲಸವನ್ನು ಮಾಡಿದ್ದರೆ, ಅವರ ಹಣವನ್ನು ಬೇಗನೆ ಕೊಟ್ಟು ಕಳುಹಿಸಿರಿ.

ಶ್ರೀ ಹೆಚ್. ಆಂಜನೇಯ: ನಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ, ಅವರುಗಳು ನೋಡಿ ಹಣವನ್ನು ಕೊಡುತ್ತಾರೆ. ಆ ಕೆಲಸ ಬೇಗ ಮಾಡುವಂತೆ ಅವರಿಗೆ ನಾನು ಹೇಳುತ್ತೇನೆ.

ಅಧ್ಯಕ್ಷರು: O.K. ಮಾನ್ಯ ರೇವಣ್ಣನವರೆ ಪ್ರಶ್ನೆಯನ್ನು ಕೇಳಿ.

ಸಮುದಾಯ ಭವನಗಳಿಗೆ ಅನುದಾನ

46 (1104); ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)

ಅ) ಕಳೆದ 3 ವರ್ಷಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ನೀಡಲಾಗಿರುವ ಸಮುದಾಯ ಭವನ ಹಾಗೂ ಇತರೆ ಅಭಿವೃದ್ಧಿಗಾಗಿ ನೀಡಲಾಗಿರುವ ಅನುದಾನವೆಷ್ಟು (ವಿಧಾನಸಭಾವಾರು ಮಾಹಿತಿ ನೀಡುವುದು);

ಆ) ಈ ಸಮುದಾಯದವರಿಗೆ ಅನುದಾನವನ್ನು ನೀಡಲು ಅನುಸರಿಸಲಾಗುವ ಮಾನದಂಡಗಳೇನು (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ವತಿಯಿಂದ ಸಮುದಾಯ ಭವನಗಳನ್ನು ನಿರ್ಮಿಸುತ್ತಿರುವುದಿಲ್ಲ.